Subject Code : **16**

**March, 2014** **OPTIONAL KANNADA**

*Time : 3 Hours 15 Minutes* ] [ *Total No. of Questions : 61* ] [ *Max. Marks : 100*

***ಸೂಚನೆ :*** i) ಪ್ರಶ್ನೆಗಳ ಸಂಖ್ಯೆಗಳನ್ನು ಉತ್ತರ ಪತ್ರಿಕೆಯ ಎಡ ಭಾಗದಲ್ಲಿ ಬರೆಯಿರಿ.

ii) ಪ್ರತಿ ವಿಭಾಗದಲ್ಲಿರುವ ಸೂಚನೆಗಳಿಗೆ ಅನುಗುಣವಾಗಿ ಉತ್ತರಿಸಿ.

**ಭಾಗ – I**

I. ಈ ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ : 7 × 1 = 7

1) ನಂದನವನದಲ್ಲಿದ್ದ ಮರಗಳು ಯಾವುವು ?

2) ಸಾಮವೇದಿಗಳ ಮನೆಗೆ ವಿಶ್ವದೇವರಾಗಿ ಬಂದವರು ಯಾರು ?

3) ವಿಶ್ವವನ್ನು ವರ್ಣಿಸುವ ರೀತಿಯನ್ನು ಯಾವ ಹೆಸರಿನಿಂದ ಕರೆಯಲಾಗಿದೆ ?

4) ಮಗಳನ್ನು ಎಂಥವರಿಗೆ ಕೊಡಬೇಕು ?

5) ಭರತೇಶನನ್ನು ಕಾಣಲು ರಾಣಿಯರು ಎಲ್ಲಿಗೆ ಹೋದರು ?

6) ತಾಯಿ ದೇವೇಂದ್ರನಿಗೆ ಏನಿಲ್ಲವೆಂದು ಹೇಳುತ್ತಾಳೆ ?

7) ಇಮ್ಮಡಿ ತಿಮ್ಮರಾಜ ಒಡೆಯರು ತಾವಾಗಿಯೇ ಬಯಸಿ ಪಡೆದ ಹೊಸ ಬಿರುದು ಯಾವುದು ?

II. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ***ಮೂರಕ್ಕೆ*** ಹತ್ತರಿಂದ ಹದಿನೈದು ಪದಗಳಲ್ಲಿ ಉತ್ತರಿಸಿ : 3 × 2 = 6

8) ಪಾರ್ಥ ಊರ್ವಶಿಯನ್ನು ಯಾವ ಶಬ್ದಗಳಿಂದ ಸ್ವಾಗತಿಸಿದನು ?

9) ಅರ್ಜುನನ ಬಳಿ ಬಂದ ಅಗ್ನಿಯು ಏನನ್ನು ಬೇಡಿದ ?

10) ಶಿವನ ಸ್ವಾಗತಕ್ಕೆ ಸಾಮವೇದಿಗಳು ಹೇಗೆ ಸಿದ್ಧತೆ ನಡೆಸಿದರು ?

11) ಅನ್ನದ ಮಹತ್ತ್ವವನ್ನು ವಿವರಿಸಿ.

12) ಆಸ್ಥಾನದ ಗಾಯಕಿಯರು ಹೇಗೆ ಹಾಡಿದರು ?

III. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ***ಎರಡು*** ಪ್ರಶ್ನೆಗಳಿಗೆ ಮೂವತ್ತರಿಂದ ನಲವತ್ತು ಪದಗಳಲ್ಲಿ ಉತ್ತರಿಸಿ : 2 × 3 = 6

13) ಸ್ತ್ರೀಯರು ನಂದನವನದಲ್ಲಿ ಮಾಡಿದ ಚೇಷ್ಟೆಗಳಾವುವು ?

14) ಊರ್ವಶಿಯ ರೋಷದ ವರ್ಣನೆಯನ್ನು ಕವಿ ಕುಮಾರವ್ಯಾಸ ಹೇಗೆ ನಿರೂಪಿಸಿದ್ದಾನೆ ?

15) ಶ್ವಪಚ ದೇವರು ಶಿವನನ್ನು ಅರ್ಚಿಸುತ್ತಿದ್ದ ಬಗೆ ಹೇಗೆ ?

16) ಮನುಷ್ಯ ಶರೀರ ಧರ್ಮವನ್ನು ಅರ್ಜುನನು ಹೇಗೆ ಹೇಳಿದ್ದಾನೆ ?

IV. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ನಲವತ್ತರಿಂದ ಅರವತ್ತು ಪದಗಳಲ್ಲಿ ಉತ್ತರಿಸಿ : $2 \times 5 = 10$

17) ಪಂಪನು ಬಣ್ಣಿಸಿದ ನಂದನವನದ ಚೆಲುವನ್ನು ವರ್ಣಿಸಿ.

18) ಶ್ವಪಚದೇವರು ಮತ್ತು ಸಾಮವೇದಿಗಳ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.

19) ಅರ್ಜುನ ಮತ್ತು ಮಾತಲಿಯವರ ನಡುವಿನ ಸಂವಾದವನ್ನು ಕುರಿತು ವಿವರಿಸಿ.

20) 'ಗಾಳಿಯ ಹೆಜ್ಜೆ ತೋರುವುದೇ' ಕಾವ್ಯ ಭಾಗದ ಸ್ವಾರಸ್ಯವನ್ನು ವಿವರಿಸಿ.

V. ಈ ಕೆಳಗಿನ ಪದ್ಯಗಳಲ್ಲಿ **ಎರಡರ** ಸಂದರ್ಭ ಸೂಚಿಸಿ ಮಹತ್ತ್ವವನ್ನು ತಿಳಿಸಿ : $2 \times 3 = 6$

21) ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂದ ನೋಡುತಂ
ಕೆಲವಂ ಸಜ್ಜನ ಸಂಗದಿಂದಲರಿಯಲ್ ಸರ್ವಜ್ಞನಪ್ಪ ನರಂ
ಪಲವಂ ಪಳ್ಳ ಸಮುದ್ರವೈ ಹರಹರಾ ಶ್ರೀಚೆನ್ನಸೋಮೇಶ್ವರಾ

22) ಚಿತ್ತವಿಲ್ಲದೆ ಗುಡಿಯ ಸುತ್ತಿದಡೆ ಫಲವೇನು
ಎತ್ತು ಗಾಣವನು ಹೊತ್ತು ತಾ। ನಿತ್ಯದಿ
ಸುತ್ತಿ ಬಂದಂತೆ ಸರ್ವಜ್ಞ.

23) ಎಲವೊ ಭಂಡರ ಭಾವ ಖೂಳರ
ನಿಳಯ ಖಳರಧಿನಾಥ ವಂಚಕ
ತಿಲಕ ಗಾವಿಲರೊಡೆಯ ಬಂಧುಷೆ ದುಷ್ಟ ನಾಯಕರ
ಎಲೆ ಮರುಳೆ ತಾನಾವಳೆಂಬುದ
ತಿಳಿಯಲಾ ನೀನಾವನೆಂಬುದ
ನಿಳೆಯರಿಯದೇ ಭಂಡ ಫಡ ಹೋಗೆಂದಳಿಂದುಮುಖಿ.

VI. ಈ ಕೆಳಗಿನ ಸಾಲುಗಳಲ್ಲಿ **ಎರಡರ** ಸಂದರ್ಭವನ್ನು ಸೂಚಿಸಿ ಮಹತ್ತ್ವವನ್ನು ವಿವರಿಸಿ : $2 \times 2 = 4$

24) ತಳಿರೊಳ್ ನೀನೆ ಬೆಡಂಗನ್ಯೆ.

25) ಕಾಮವುಂಟೇ ಮರಕ್ಕೆ, ಕ್ರೋಧವುಂಟೇ ಲತೆಗೆ.

26) ಈ ಮಹಿಳೆಗೆ ಅಭಿನಂದನೀಯ.

27) ಬಡವಂ ಬಲ್ಲಿದನಾಗದೆ.

## ಭಾಗ – II

VII. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ನಲವತ್ತರಿಂದ ಅರವತ್ತು ಪದಗಳಲ್ಲಿ ಉತ್ತರಿಸಿ : $2 \times 5 = 10$

28) ದೇವೇಂದ್ರ ಯಾರು ? ಅವನು ಪರೀಕ್ಷೆಯ ಆತಂಕದ ನಡುವೆಯೂ ಊರಿಗೆ ಬರಲು ಕಾರಣವೇನು ?

29) 'ದಿವಸ'ದ ದಿನದ ಸಮಾರಂಭದ ವಿವರಗಳನ್ನು ಬರೆಯಿರಿ.

30) ದೇವೇಂದ್ರನ ತಂದೆಯ ಸ್ವಭಾವ ಕುರಿತು ಬರೆಯಿರಿ.

VIII. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ *ಒಂದಕ್ಕೆ* ಅರವತ್ತರಿಂದ ಎಂಬತ್ತು ಪದಗಳಲ್ಲಿ ಪ್ರಬಂಧ ಬರೆಯಿರಿ : $1 \times 10 = 10$

31) ದೇವೇಂದ್ರನ ತಾಯಿ 'ಗಟ್ಟಿಗಿತ್ತಿ' ಹೇಗೆ ? ವಿವರಿಸಿ.

32) ಗಿಲ್ ಯಾರು ? ದೇವೇಂದ್ರನಿಗೂ ಅವನಿಗೂ ಇದ್ದ ಸಂಬಂಧ ಎಂಥಹದು ? ಅವನು ದೇವೇಂದ್ರನಿಗೆ ನಿರೂಪಿಸಿದ ಕಥೆಯನ್ನು ವಿವರಿಸಿ.

## ಭಾಗ – III

IX. ಈ ಕೆಳಗಿನ ಸಾಲುಗಳಲ್ಲಿ ಯಾವುದಾದರೂ *ಎರಡರ* ಸಂದರ್ಭವನ್ನು ಸೂಚಿಸಿ, ಮಹತ್ತ್ವವನ್ನು ವಿವರಿಸಿ : $2 \times 2 = 4$

33) ಇನ್ ಸಿಡಿಲ್ಗೆ ನೀನ್ ಅಂಬುನ್ ಹೂಡಬೇಡ ಕಂಡೆಯಾ

34) ತಿಪ್ಪೆಯಲ್ಲಿ ದೊರೆತ ರತ್ನವೂ ರತ್ನವಲ್ಲದೆ ಉಂಟೆ

35) ಅಯ್ಯೋ ನಾನೊಬ್ಬ ಗಂಡಸಾಗಿ ಹುಟ್ಟಬಾರದಾಗಿದ್ದಿತ್ತೆ ?

X. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ *ಎರಡಕ್ಕೆ* ಮೂವತ್ತರಿಂದ ನಲವತ್ತು ಪದಗಳಲ್ಲಿ ಉತ್ತರಿಸಿ : $2 \times 3 = 6$

36) ಜಗ್ಗಯ್ಯ ನಾಯಕನ ಮೇಲೆ ಮಾದೇವಮ್ಮಣ್ಣಿ ಕೋಪಿಸಿಕೊಳ್ಳಲು ಕಾರಣವೇನು ?

37) ಮಾದೇವಮ್ಮಣ್ಣಿ ಕೆರಳಲು ಕಾರಣವೇನು ?

38) ನಂಜಶೆಟ್ಟಿ ಮಾದೇವಮ್ಮಣ್ಣಿಯಲ್ಲಿ ಕ್ಷಮೆಯನ್ನು ಹೇಗೆ ಕೋರುತ್ತಾನೆ ?

XI. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ *ಒಂದಕ್ಕೆ* ಅರವತ್ತರಿಂದ ಎಂಬತ್ತು ಪದಗಳಲ್ಲಿ ಪ್ರಬಂಧವನ್ನು ಬರೆಯಿರಿ : $1 \times 10 = 10$

39) ಮಾದೇವಮ್ಮಣ್ಣಿಯ ವ್ಯಕ್ತಿತ್ವವನ್ನು ಸವಿವರವಾಗಿ ಬರೆಯಿರಿ.

40) ಮೈಸೂರು ಮಹಾರಾಜರ ವ್ಯಕ್ತಿತ್ವವನ್ನು ಕುರಿತು ಬರೆಯಿರಿ.

## ಭಾಗ – IV

XII. ಈ ಕೆಳಗಿನ ಪದಗಳಲ್ಲಿ ಯಾವುದಾದರೂ *ಎರಡಕ್ಕೆ* ಟಿಪ್ಪಣಿ ಬರೆಯಿರಿ : $2 \times 2 = 4$

41) ಮಾತಲಿ

42) ತ್ರಿಪದಿ

43) ಅಜಮುಖ ವ್ಯಾಘ್ರ

XIII. ಈ ಕೆಳಗಿನ ಶಬ್ದಗಳಲ್ಲಿ ಯಾವುದಾದರೂ *ನಾಲ್ಕರ* ಅರ್ಥ ತಿಳಿಸಿ : $4 \times \frac{1}{2} = 2$

44) ತುರಗ

45) ದಂಡಿಗೆ

46) ವಾರಿಧಿ

47) ಶಿಖಿ

48) ರಿಪು

49) ತೃಣ

XIV. ಈ ಕೆಳಗಿನ ಶಬ್ದಗಳಲ್ಲಿ ಯಾವುದಾದರೂ **ಮೂರು** ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ : $3 \times 1 = 3$

50) ಅರಣ್ಯ

51) ಬಾನು

52) ಭೂಮಿ

53) ಚಂದ್ರ

54) ಈಶ್ವರ

XV. ಈ ಕೆಳಗಿನ ನುಡಿಗಟ್ಟುಗಳಲ್ಲಿ ಯಾವುದಾದರೂ **ಎರಡನ್ನು** ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ : $2 \times 1 = 2$

55) ಹಲ್ಲುಕಿರಿ

56) ವೇದವಾಕ್ಯ

57) ಕೃಪಾಕಟಾಕ್ಷ

58) ಮಣ್ಣುಮುಕ್ಕು

## ಭಾಗ – V

XVI. ಈ ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ : $2 \times 5 = 10$

59) ಈ ಕೆಳಗಿನ ಪದ್ಯಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ತಿಳಿಸಿ :

ಇಳಿದು ರಥವನು ದಿವಿಜರಾಯನ
ನಿಳಯವನು ಹೊಕ್ಕನು ಕಿರೀಟಿಯ
ನಳವಿಯಲಿ ಕಂಡಿದಿರು ಬಂದು ನಗುತ ಶತಮನ್ಯು
ಸೆಳೆದು ಬಿಗಿಯಪ್ಪಿದನು ಕರದಲಿ
ತುಳುಕಿ ಕರವನು ತಂದು ತನ್ನಯ
ಕೆಲದೊಳಗೆ ಕುಳ್ಳಿರಿಸಿದನು ಸಿಂಹಾಸನಾರ್ಧದಲಿ

60) ಈ ಕೆಳಗಿನ ಗದ್ಯಭಾಗವನ್ನು ಹೊಸಗನ್ನಡಕ್ಕೆ ಅನುವಾದಿಸಿ :

ಇತ್ತ ಮಣಮುಂದಪುತ್ತೂರಿಂದೊರ್ವಂ ಪರಿತಂದು ಮೆಯಿಕ್ಕಿ ದೇವ ಇಂದೀಗಳೊರ್ವ ವೃದ್ಧ ಮಾಹೇಶ್ವರಂ ಬಂದು ಚಪ್ಪರವನ್ನು ಮುಱಿದು ವೇದಿಕೆಯಂ ಕೆಡಹಿ ಬಾಯ್ಗೆ ಬಂದುದನೆಂದು ಕಯ್ಗೆ ಬಂದುದಂ ಮಾಡಿದಂ – ಇದೆಮಗಪಶಕುನಂ ಈ ಬಾರಿ ಮದುವೆಯಳವಡದು ಎನುತ್ತೆ ಅವಂ ಪೋಗಲ್.

61) ಈ ಕೆಳಗೆ ಸೂಚಿಸಿರುವ ಯಾವುದಾದರೂ ***ಒಂದು*** ವಸ್ತುವಿನ ಬಗೆಗೆ ಸ್ವಂತ ಕತೆ / ಕವಿತೆಯನ್ನು ರಚಿಸಿ :

ಅ) ದೇಶಭಕ್ತಿ

ಆ) ಕನಸು